# ನೇತ್ರ ದಾನ ಮಾಡಿ - ದೃಷ್ಟಿ ನೀಡಿ

## ಲಯನ್ಸ್ ಅಂತರರಾಷ್ಟ್ರೀಯ ನೇತ್ರಭಂಡಾರ

ಕೊಡುಗೆ : ಮಿಸ್. ಕೇರೆನ್ ಓ ಸುಲೇವಾನ್ ಮತ್ತು ಮಾನಂದಿ ನಂಜುಂಡ ಶೆಟ್ಟಿ ಟ್ರಸ್ಟ್

**ಬೆಂಗಳೂರು ಪಶ್ಚಿಮ ಲಯನ್ಸ್ ಸೂಪರ್‌ಸ್ಪೇಷಾಲಿಟಿ ಕಣ್ಣಾಸ್ಪತ್ರೆ**

ನಂ. ೫೬/೨, ಲಯನ್ಸ್ ಕಣ್ಣಾಸ್ಪತ್ರೆ ರಸ್ತೆ, ಬೆಂಗಳೂರು - ೫೬೦ ೦೦೨

Ph : 22235005, 22237628, 22243974 Fax : 22232562

E-mail : lionseye@blr.vsnl.net.in www.bwlionseyehospital.org

## ನೇತ್ರಗಳು ಪವಿತ್ರವಾದವು : ಮಣ್ಣುಮಾಡ ಬೇಡಿ, ಸುಡಬೇಡಿ

ಲಯನ್ಸ್ ಅಂತರರಾಷ್ಟ್ರೀಯ ನೇತ್ರಭಂಡಾರವು ಅಂತರ ರಾಷ್ಟ್ರೀಯ ಮಟ್ಟದಲ್ಲಿ ೧೯೮೪ ರಿಂದ ಸೇವೆ ಸಲ್ಲಿಸುತ್ತಿದೆ. ಈ ನೇತ್ರ ಭಂಡಾರದ ಸೇವೆ ಜನರಿಗೆ ದಿನದ ೨೪ ಘಂಟೆಗಳು ದೊರೆಯುತ್ತದೆ. ಇಲ್ಲಿಯವರೆವಿಗೆ ೯೯೦೦ ನೇತ್ರಗಳನ್ನು (ಉಚಿತವಾಗಿ) ಶೇಖರಿಸಿ ವಿತರಿಸಿಲಾಗಿದೆ. ನಮ್ಮಲ್ಲಿ ೭೩,೦೦೦ ಸಾವಿರ ಜನರು ತಮ್ಮ ನೇತ್ರಗಳನ್ನು ಮರಣನಂತರ ದಾನವಾಗಿ ನೀಡಲು ಪ್ರತಿಜ್ಞೆಯನ್ನು ಮಾಡಿ ತಮ್ಮ ಹೆಸರನ್ನು ನೊಂದಾಯಿಸಿರುತ್ತಾರೆ. ನೇತ್ರದಾನವು ಪವಿತ್ರವಾದ ಮಾನವತಾ ಸೇವೆ. ಈ ಅಂದೋಲನದ ಜಾಗ್ರತಿಯನ್ನು ಎಲ್ಲಾ ಜನರಲ್ಲೂ ಮೂಡಿಸಬಹುದಾಗಿದೆ.

## ನೇತ್ರದಾನದ ಬಗ್ಗೆ ಮಾಹಿತಿ

ತುಂಬಾ ವಿಷಾದಕರ ವಿಷಯವೆಂದರೆ ನಮ್ಮ ದೇಶದಲ್ಲಿ ೨೫,೦೦,೦೦೦ ಲಕ್ಷ ಪುರುಷರು, ಮಹಿಳೆಯರು ಮತ್ತು ಮಕ್ಕಳು, ಬೇರೆ ವ್ಯಕ್ತಿ ದಾನ ಮಾಡಿದ ನೇತ್ರಗಳಿಂದ ದೃಷ್ಟಿ ಮರಳಿ ಪಡೆಯಲು ಕಾಯುತ್ತಿದ್ದಾರೆ.

೧. **ಮರಣಾನಂತರವೇ ನೇತ್ರದಾನ ಮಾಡುವುದು, ನಮ್ಮ ನೇತ್ರಗಳು ಮರಣನಾಂತರವೂ ಜೀವಿತವಾಗಿರಲಿ.**

೨. ನೇತ್ರ ಸಂಗ್ರಹಣೆಗೆ ಬೇಕಾಗುವ ಸಮಯ ಕೇವಲ ೨೦ ನಿಮಿಷಗಳು. ನೇತ್ರ ಸಂಗ್ರಹಣೆಯ ನಂತರ ಮೃತರ ಮುಖ ಯಾವುದೇ ವಿಕಾರವಾಗುವುದಿಲ್ಲ.

೩. ವ್ಯಕ್ತಿ ಮರಣದ ೬ ಘಂಟೆಯೊಳಗೆ ನೇತ್ರಗಳನ್ನು ಸಂಗ್ರಹಿಸಬೇಕಾಗಿದೆ.

೪. ಒಬ್ಬ ವ್ಯಕ್ತಿ ದಾನ ಮಾಡಿದ ನೇತ್ರಗಳು ಇಬ್ಬರು **ಕಾರ್ನಿಯಾ ಅಂಧರಿಗೆ** ದೃಷ್ಟಿ ಮರಳಿ ನೀಡುತ್ತದೆ.

೫. ಎಲ್ಲರೂ ನೇತ್ರದಾನ ಮಾಡಬಹುದು : ಸಕ್ಕರೆ ರೋಗ, ರಕ್ತದ ಒತ್ತಡ, ಪೊರೆ ರೋಗ, ಕನ್ನಡಕ ಧಾರಣೆ ಯಾವುವು ನೇತ್ರದಾನಕ್ಕೆ ಅಡ್ಡಿ ಬರುವುದಿಲ್ಲ.

೬. ಮರಣಿಸಿದ ವ್ಯಕ್ತಿ ನೇತ್ರದಾನಿಯಾಗಿರಬೇಕಿಲ್ಲ.

೭. ನೇತ್ರ ಸಂಗ್ರಹಣೆ ಮತ್ತು ವಿತರಣೆ **ಉಚಿತವಾದ ಸೇವೆ.**

೮. ವ್ಯಕ್ತಿ ಮರಣಿಸಿದ ಯಾವುದೇ ಸ್ಥಳದಲ್ಲಿ, **ಮನೆ, ಆಸ್ಪತ್ರೆ, ಶವಾಗಾರ, ಚಿತಾಗಾರ,** ಇನ್ಯಾವುದೇ ಸ್ಥಳದಿಂದ ನೇತ್ರಗಳನ್ನು ಸಂಗ್ರಹಿಸಲಾಗುವುದು. ಈ ವ್ಯವಸ್ಥೆ ಬೆಂಗಳೂರು ನಗರಕ್ಕೆ ಸೀಮಿತಗೊಳಿಸಿದೆ.

೯. ತಾವು ದಯಮಾಡಿ ತಮ್ಮ ಹಾಗೂ ಕುಟುಂಬದವರ ನೇತ್ರದಾನ ಮಾಡಿಸಿ, ತಮಗೆ ಉಚಿತವಾಗಿ ವ್ಯಾಲೆಟ್ ಕಾರ್ಡನ್ನು ಕಳುಹಿಸಿಕೊಡಲಾಗುವುದು.

## ಯಾವುದೇ ಮರಣ ಸಂಭವಿಸಿದಾಗ ತಾವು ದಯಮಾಡಿ

(ಅ) ಹತ್ತಿರ ಸಂಬಂಧಿಗಳಿಗೆ ನೇತ್ರದಾನದ ಬಗ್ಗೆ ಮನವೊಲಿಸಿ

(ಆ) ಕಣ್ಣ ರೆಪ್ಪೆಗಳನ್ನು ಮುಚ್ಚಿಡಿ.

(ಇ) ತಲೆಯನ್ನು ಸ್ವಲ್ಪ ಎತ್ತರಿಸಿ, ವಿದ್ಯುತ್ ಪಂಕವನ್ನು ನಿಲ್ಲಿಸಿ.

(ಈ) ಸಾಧ್ಯವಾದರೆ ಪಾಲಿತೀನ್ ಚೀಲದಲ್ಲಿ ಮಂಜುಗಡ್ಡೆಯನ್ನು ಹಾಕಿ ಹಣೆಯ ಮೇಲಿರಿಸಿ.

(ಉ) ಕೂಡಲೆ ನೇತ್ರಭಂಡಾರಕ್ಕೆ ಸುದ್ದಿ ಮುಟ್ಟಿಸಿ.

**ಸಂಪರ್ಕಿಸಿ : ನೇತ್ರದಾನಕ್ಕಾಗಿ ದೂರವಾಣಿ**
**22235005/ 22121255/ 22121253**